IJCRT.ORG ISSN : 2320-2882
INTERNATIONAL JOURNAL OF CREATIVE RESEARCH THOUGHTS (IJCRT)
An International Open Access, Peer-reviewed, Refereed Journal

# ಕನ್ನಡ ಸಾಹಿತ್ಯ ಪರಿಷತ್ತು ಬೆಳೆದುಬಂದ ದಾರಿ

**ಡಾ.ಎಸ್.ಬಿ.ಚನ್ನಗೌಡ್ರ.** ಎಂ.ಎ
**ಕನ್ನಡ ಪ್ರಾಧ್ಯಾಪಕರು ಹಾಗೂ ಪ್ರಾಂಶುಪಾಲರು**
**ಬಿ.ಆರ್.ತಂಬಾಕದ ಕಲಾ ವಾಣಿಜ್ಯ ಮತ್ತು ವಿಜ್ಞಾನ ಪ್ರಥಮ ದರ್ಜೆ ಮಹಾವಿದ್ಯಾಲಯ ಹಿರೇಕೆರೂರು**

ಕನ್ನಡ ಸಾಹಿತ್ಯ ಪರಿಷತ್ತು ಇಂದಿಗೆ 107 ವಸಂತಗಳನ್ನು ಪೂರೈಸಿ 108ನೇ ವರ್ಷಕ್ಕೆ ಕಾಲಿಡುವ ಸಂಭ್ರಮದ ಕ್ಷಣ. ಕನ್ನಡ ಭಾಷೆ, ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಗಳ ಸಂವರ್ಧನೆ ಹಾಗೂ ಸಂರಕ್ಷಣೆಯ ಮಹದಾಸೆಯೊಂದಿಗೆ 05.05.1915 ರಲ್ಲಿ ಉದಯವಾದ ಕನ್ನಡಿಗರ ಪ್ರಾತಿನಿಧಿಕ ಮೇರು ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಸ್ವಾತಂತ್ರ್ಯ ಪೂರ್ವದಲ್ಲಿ ಕನ್ನಡ ಭಾಷಿಕರು ಬೇರೆ ಭಾಷೆಯ ಅಧೀನದಲ್ಲಿದ್ದರು ಈ ಸಂಕಟದಿಂದ ಹೊರಬರಲು ಕನ್ನಡ ಭಾಷೆ, ಪ್ರದೇಶ, ಸಂಸ್ಕೃತಿಯನ್ನು ಒಗ್ಗೂಡಿಸುವ ಅದರ ಅಸ್ಮಿತತೆಯನ್ನು ರಕ್ಷಿಸಿಕೊಳ್ಳುವ ಪರಿಸ್ಥಿತಿ ಎದುರಾಗಿತ್ತು. ಆ ಸಂದರ್ಭದಲ್ಲಿ ಕನ್ನಡ ಕಟ್ಟುವ ಕಾರ್ಯಕ್ಕೆ ನೆರವಾಗಿದ್ದು ಮೈಸೂರು ಸಂಸ್ಥಾನದ ನಾಲ್ವಡಿ ಕೃಷ್ಣರಾಜ ಒಡೆಯರ್. ಸಾಮಾಜಿಕ ಚಳುವಳಿಯ ಹರಿಕಾರರಾಗಿ ನಾಡಿನಾದ್ಯಂತ ಪ್ರಜಾಪ್ರಭುತ್ವದ ಗೌರವ ಎತ್ತಿ ಹಿಡಿದವರು ಒಡೆಯರ್. ರಾಜ್ಯಕ್ಕೆ ಅಗತ್ಯವಿರುವ ಕಾರ್ಯಗಳನ್ನು ಪ್ರಭುತ್ವ ತೀರ್ಮಾನ ಮಾಡಬಾರದು ಸಾರ್ವಜನಿಕ ಪ್ರತಿನಿಧಿಗಳು ಚರ್ಚಿಸಿ ತೀರ್ಮಾನಿಸಬೇಕು ಎನ್ನುವ ನಿರ್ಣಯದೊಂದಿಗೆ 1909ರಲ್ಲಿ ಜನಪ್ರತಿನಿದಿ ಸಮಿತಿಯನ್ನು ರಚಿಸಿದ್ದರು. ಶಾಹು ಮಹಾರಾಜರನ್ನು ಬಿಟ್ಟರೆ ಪ್ರಜಾಪ್ರಭುತ್ವದೊಳಗೆ ರಾಜ್ಯಭಾರ ಮಾಡಿದ ಎರಡನೇ ರಾಜ ನಾಲ್ವಡಿ ಕೃಷ್ಣರಾಜ ಒಡೆಯರ್. ಸಂವಿಧಾನ ರಚನೆಯಾಗುವ ಮೊದಲೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿ ಹಿಡಿದು ಸಾಮಾಜಿಕ ಅನಿಷ್ಟಗಳನ್ನು ನಿಷೇಧಿಸಿದ ಮಹಾ ಮಾನವತಾವಾದಿ ಇವರು. ಕನ್ನಡ ನಾಡಿಗೆ ಒಡೆಯರ್ ಕೊಡುಗೆ ಅಪಾರ ಅನನ್ಯವಾದುದು. ಸಮಾಜದಲ್ಲಿ ಎಲ್ಲ ಕ್ಷೇತ್ರಗಳಿಗೂ ಪ್ರಧಾನ ಆದ್ಯತೆ ನೀಡಿ ಕನ್ನಡ ನಾಡು ಉನ್ನತ ಶಿಕ್ಷಣದಿಂದ ವಂಚಿತವಾಗಬಾರದೆಂದು ರಾಜ್ಯದಲ್ಲಿ ಒಂದು ವಿಶ್ವವಿದ್ಯಾಲಯ ಸ್ಥಾಪನೆ ಮಾಡಬೇಕೆಂಬುದರ ಪ್ರತಿಫಲವಾಗಿ ರಾಜ್ಯದಲ್ಲಿಯೇ ಮೊದಲ ಬಾರಿಗೆ ಮೈಸೂರು ವಿಶ್ವವಿದ್ಯಾಲಯವನ್ನು ಪ್ರಾರಂಭ ಮಾಡಿದರು. ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ, ರಕ್ಷಿಸಲು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆಯಾಗಲು ಮುಂದಾಗಿ ಶ್ರೀ.ಹೆಚ್.ವಿ.ನಂಜುಂಡಯ್ಯನವರ ಅಧ್ಯಕ್ಷತೆಯಲ್ಲಿ ನಾಲ್ಕು ದಿನ ಸುಧೀರ್ಘವಾಗಿ ಚರ್ಚಿಸಿ ಪರಿಷತ್ತು ಸ್ಥಾಪನೆಗೆ ತೀರ್ಮಾನಿಸಲಾಯಿತು. ಗಗನ ಕುಸುಮವಾಗಿದ್ದ ಕನ್ನಡ ಭಾಷೆಯನ್ನು ಮನೆಮನೆಗೆ ತಲುಪಿಸಲು ಹಾಗೂ ಕನ್ನಡ ಭಾಷೆಯಲ್ಲಿ ಕೃತಿಗಳನ್ನು ರಚಿಸುವವರ ಪ್ರೋತ್ಸಾಹಕ್ಕಾಗಿ ಸ್ವತಂತ್ರ ಅಧಿಕಾರವುಳ್ಳ ಪರಿಷತ್ತೊಂದು ಅಸ್ತಿತ್ವದಲ್ಲಿರಬೇಕು ಹಾಗೂ ಸರಕಾರದವರು ಆ ಪರಿಷತ್ತನ್ನು

ಅಂಗೀಕರಿಸಿ ಅದಕ್ಕೆ ವಿಶೇಷ ಸ್ಥಾನಮಾನ ನೀಡಿ ಅದಕ್ಕೆ ವಿಶೇಷವಾದ ಸಹಾಯ ಮಾಡುವುದು ಉಚಿತವೆಂದು ನಿರ್ಣಯಿಸಿ 1914 ರಲ್ಲಿ ಅಂದಿನ ಮೈಸೂರು ಸಂಸ್ಥಾನದ ಸಂಪದಭ್ಯುದಯ ಸಮಾಜ ತನ್ನ ವಾರ್ಷಿಕ ಅಧಿವೇಶನದಲ್ಲಿ ಕೈಗೊಂಡ ಮಹತ್ವದ ನಿರ್ಧಾರ ಕನ್ನಡ ಸಾಹಿತ್ಯ ಪರಿಷತ್ತು ಉಗಮಕ್ಕೆ ಕಾರಣವಾಯ್ತು. ಮೈಸೂರು ಆಸ್ಥಾನದ ಅರಸರಾಗಿದ್ದ ರಾಜಋಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪರಿಷತ್ತು ಸ್ಥಾಪನೆಯಾಗಲು ಮುನ್ನುಡಿ ಬರೆದು ಚಾಲನೆ ನೀಡಿದರು. ಅಂದು ಬೆಂಗಳೂರಿನ ಶಂಕರಪುರ ಬಡಾವಣೆಯಲ್ಲಿರುವ ಚಿಕ್ಕ ಕೊಠಡಿಯೊಂದರಲ್ಲಿ ಆರಂಭವಾದ **"ಕರ್ನಾಟಕ ಸಾಹಿತ್ಯ"** ಪರಿಷತ್ತೇ ಇಂದು ಬೃಹತ್ ಬೆಂಗಳೂರು ಮಹಾನಗರದ ಹೃದಯ ಭಾಗದಲ್ಲಿರುವ ಚಾಮರಾಜಪೇಟೆಯ ಪಂಪ ಮಹಾಕವಿ ರಸ್ತೆಯಲ್ಲಿ ಇಂದು ಹೆಮ್ಮರವಾಗಿ ಕನ್ನಡಿಗರ ಕಲ್ಪವೃಕ್ಷವಾಗಿ **"ಕನ್ನಡ ಸಾಹಿತ್ಯ ಪರಿಷತ್ತು"** ಆಗಿ ಕಂಗೊಳಿಸುತ್ತಿದೆ.

ಶ್ರೀ ಕೃಷ್ಣರಾಜ ಪರಿಷನ್ಮಂದಿರ ಸಭಾಂಗಣ, ಬಿ.ಎಂ.ಶ್ರೀ, ಅಚ್ಚುಕೂಟ, ಸುವರ್ಣ ಮಹೋತ್ಸವ, ವಜ್ರ ಮಹೋತ್ಸವ ಕಟ್ಟಡಗಳು ತಲೆಯತ್ತಿ ಕನ್ನಡದ ಕಾರ್ಯ ಭರದಿಂದ ಸಾಗಿದೆ. 1940 ರಲ್ಲಿ ರಜತ ಮಹೋತ್ಸವವನ್ನೂ, 1973 ರಲ್ಲಿ ಸುವರ್ಣ ಮಹೋತ್ಸವವನ್ನೂ, 1977 ವಜ್ರ ಮಹೋತ್ಸವವನ್ನೂ 1991 ರಲ್ಲಿ ಅಮೃತ ಮಹೋತ್ಸವವನ್ನೂ, 2015 ರಲ್ಲಿ **ಶತಮಾನೋತ್ಸವ** ಸಮಾರಂಭವನ್ನು ಅತ್ಯಂತ ಸಂಭ್ರಮದಿಂದ ಆಚರಿಸಿಕೊಂಡಿದೆ. ಕನ್ನಡಿಗರ ಆಶೋತ್ತರಗಳಿಗೆ ಪೂರಕವಾಗಿ ಒಂದು ಶತಮಾನವನ್ನು ಅರ್ಥಪೂರ್ಣವಾಗಿ ಪೂರೈಸಿದ ಸವಿನೆನಪಿಗಾಗಿ ಕರ್ನಾಟಕ ಘನ ಸರ್ಕಾರದ ಅನುದಾನದಲ್ಲಿ 3 ಮಹಡಿಗಳ **"ಶತಮಾನೋತ್ಸವ ಸ್ಮಾರಕ ಭವನ"**ದ ನಿರ್ಮಾಣ ಕಾರ್ಯವನ್ನು ಡಾ. ಮನು ಬಳಿಗಾರರವರು ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಂಡ ಒಂದು ತಿಂಗಳಲ್ಲಿ ಕಾರ್ಯ ಪ್ರಾರಂಭಿಸಿ ಕೇವಲ 19 ತಿಂಗಳ ಕಾಲಾವಧಿಯೊಳಗೆ ಬೃಹತ್ ಭವನ ನಿರ್ಮಾಣವಾಗಿದ್ದನ್ನು ಕಣ್ತುಂಬಿಕೊಂಡಿದ್ದೇವೆ.

ಒಂದು ಅಂದಾಜಿನ ಪ್ರಕಾರ ವಿಶ್ವದಲ್ಲಿ ಅತೀ ಹೆಚ್ಚು ಆಜೀವ ಸದಸ್ಯರನ್ನೊಳಗೊಂಡ ಏಕೈಕ ಸಾಹಿತ್ತಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಒಂದು ಕಾಲಕ್ಕೆ ನಾಲ್ವರು ಆಜೀವ ಸದಸ್ಯರಿಂದ ಪ್ರಾರಂಭವಾದ ಪರಿಷತ್ತು ಇಂದು ಬರೋಬ್ಬರಿ ಮೂರು ಲಕ್ಷ ನಲವತ್ತು ಸಾವಿರಕ್ಕಿಂತ ಹೆಚ್ಚು ಆಜೀವ ಸದಸ್ಯರನ್ನು ಹೊಂದಿರುವ ದೈತ್ಯ ಸಂಸ್ಥೆಯಾಗಿದೆ. ಅಷ್ಟೇ ಅಲ್ಲದೆ ಕನ್ನಡಕ್ಕಾಗಿ ಗಮನಾರ್ಹ ಸೇವೆ ಸಲ್ಲಿಸಿದ ಗಣ್ಯ ಸಾಹಿತಿಗಳಿಗೆ ಪರಿಷತ್ತಿನ ಅತ್ಯುಚ್ಚ ಮನ್ನಣೆಯಾದ **"ಗೌರವ ಸದಸ್ಯತ್ವ"**ವನ್ನು ನೀಡಿ ಪುರಸ್ಕೃತರ ಒಂದು ಪ್ರಾತಿನಿಧಿಕ ಕೃತಿಯನ್ನು ಪರಿಷತ್ತು ಮುದ್ರಿಸಿ ಸುಲಭ ಬೆಲೆಗೆ ಸಾಹಿತ್ಯಾಸಕ್ತರಿಗೆ ಉಣಬಡಿಸುತ್ತದೆ. 1920 ರಲ್ಲಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನವನ್ನು ಅರಸು ಮನೆತನಕ್ಕೆ ಉಳಿಸಿ ಉಪಾಧ್ಯಕ್ಷ ಸ್ಥಾನವನ್ನು ಚುನಾವಣೆಯ ಮೂಲಕ ಆಯ್ಕೆ ಮಾಡುವ ವ್ಯವಸ್ಥೆ ಆರಂಭವಾಯಿತು. ದೇಶದಲ್ಲಿ ಚುನಾವಣೆ ಎಂದರೇನು ಎಂದು ಗೊತ್ತಿಲ್ಲದ ಕಾಲದಲ್ಲಿ ಮೊದಲ ಬಾರಿಗೆ ಸಾಹಿತ್ಯ ಪರಿಷತ್ತಿಗೆ ಚುನಾವಣೆಯನ್ನು ಮೈಸೂರು ಅರಸರು ಚಾಲನೆಗೆ ತಂದರು. ಶ್ರೀ ಹೆಚ್.ಬಿ.ನಂಜುಂಡಯ್ಯ ಸಾಹಿತ್ಯ ಪರಿಷತ್ತಿನ ಪ್ರಪ್ರಥಮ ಅಧ್ಯಕ್ಷರು. ಇಂದಿಗೆ ಕನ್ನಡ ಸಾಹಿತ್ಯ ಪರಿಷತ್ತು 25 ಮಹನೀಯರು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದನ್ನು ಕಾಣಬಹುದು. ಇಂದು ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕದಾದ್ಯಂತ 30 ಜಿಲ್ಲೆಗಳಲ್ಲಿ ಎಲ್ಲ ತಾಲೂಕುಗಳಲ್ಲಿ ತನ್ನ ಘಟಕಗಳನ್ನು ಹೊಂದಿ ಕರ್ನಾಟಕ ರಾಜಾದ್ಯಂತ ತನ್ನ ಕಾರ್ಯಬಾಹುಳ್ಯವನ್ನು ವಿಸ್ತರಿಸಿಕೊಂಡಿದ್ದಲ್ಲದೇ ಗಡಿ ರಾಜ್ಯಗಳಾದ ಆಂಧ್ರಪ್ರದೇಶ, ತಮಿಳುನಾಡು, ಕೇರಳ, ಗೋವಾ ಹಾಗೂ ಮಹಾರಾಷ್ಟ್ರಗಳಲ್ಲೂ ತನ್ನ ಘಟಕಗಳನ್ನು ಹೊಂದಿರುವುದನ್ನು ಗಮನಿಸಬಹುದು. ಅಷ್ಟೇ ಅಲ್ಲದೆ ಹೊರ ರಾಷ್ಟ್ರವಾದ ಬಹರೇನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ತನ್ನ ಘಟಕ ಹೊಂದಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು, ನುಡಿ, ರಕ್ಷಣೆಗಾಗಿ ಹಾಗೂ ಕನ್ನಡ ನಾಡಿನ ಅಭೂತಪೂರ್ವ ಸಂಸ್ಕೃತಿಯನ್ನು ಸಾರಿ ಸಾರಿ ಹೇಳುವ ಅತ್ಯಮೂಲ್ಯ ಗ್ರಂಥಗಳನ್ನು ಪರಿಷತ್ತು ಪ್ರಕಟಿಸುವುದರೊಂದಿಗೆ ಇಲ್ಲಿಯವರೆಗೆ 2000 ಕ್ಕಿಂತ ಹೆಚ್ಚು ಕೃತಿಗಳನ್ನು ಪ್ರಕಟಿಸಿದ ಕೀರ್ತಿ ಸಾಹಿತ್ಯ ಪರಿಷತ್ತಿಗಿದೆ. ಇದರೊಂದಿಗೆ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಕವಿ, ಕಾವ್ಯ, ವಿಚಾರ ಸಂಕೀರ್ಣಗಳು, ಕಮ್ಮಟಗಳು, ಗೋಷ್ಠಿಗಳು ಮಹತ್ವದ ಸಾಹಿತ್ತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡಿಗರಲ್ಲಿ ಜಾಗೃತಿಯನ್ನು ಮೂಡಿಸುವ ಕರ್ನಾಟಕ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಸ್ವಾಯತ್ತ ಸಂಸ್ಥೆಯಾಗಿ ಪ್ರತಿವರ್ಷ ಕರ್ನಾಟಕದಾದ್ಯಂತ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವ ಮುಖಾಂತರ ಕನ್ನಡಾಭಿಮಾನಿಗಳು, ಕನ್ನಡ ಸಾಹಿತಿಗಳು, ವಿದ್ವಾಂಸರು ಹಾಗೂ ಸಾಹಿತ್ಯಾಸಕ್ತರು ಒಂದೆಡೆ ಸೇರಿ ವಿಚಾರ ವಿನಿಮಯವನ್ನು ಮಾಡಿಕೊಳ್ಳುವ ಮಹಾವೇದಿಕೆಯಾಗಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅತ್ಯಂತ ಸಂಭ್ರಮ ಸಡಗರದಿಂದ ಕನ್ನಡ ಜಾತ್ರೆಯಾಗಿ ಸಮಸ್ತ ಕನ್ನಡಿಗರ ದೊಡ್ಡ ಹಬ್ಬವಾಗಿ ಆಚರಣೆಯಾಗುತ್ತಲಿದೆ. ಇಲ್ಲಿಯವರೆಗೆ 85 ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳು ಅದರೊಂದಿಗೆ 2 ಹೊರನಾಡು ಕನ್ನಡಿಗರ ರಾಷ್ಟ್ರೀಯ ಸಮಾವೇಶಗಳು, ಹಳಗನ್ನಡ ಸಾಹಿತ್ಯ ಸಮ್ಮೇಳನಗಳು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿಯೇ 2008 ಅಕ್ಟೋಬರ್ 5 ಮತ್ತು 6 ರಂದು ಬಹ್ರೇನ್‌ದಲ್ಲಿ ಹೊರದೇಶದಲ್ಲಿ ಪ್ರಥಮಬಾರಿಗೆ ಅಂತರಾಷ್ಟ್ರೀಯ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಯಶಸ್ವಿಯಾಗಿ ಕೈಗೊಂಡಿರುವುದನ್ನು ಸ್ಮರಿಸಬಹುದಾಗಿದೆ. ಈ ಪ್ರಥಮಗಳನ್ನು ಅವಲೋಕಿಸುತ್ತ ಹೊರಟಾಗ ಶ್ರೀ ಕ್ಷೇತ್ರ ಶ್ರವಣ ಬೆಳಗೊಳದಲ್ಲಿ 2008 ಜೂನ್ 24, 25 ಹಾಗೂ 26 ರಂದು ಅಖಿಲ ಭಾರತ ಹಳಗನ್ನಡ ಸಾಹಿತ್ಯ ಸಮ್ಮೇಳನ ಖ್ಯಾತ ಸಂಶೋಧಕರಾದ ಡಾ. ಎಸ್.ಎಸ್.ಶೆಟ್ಟರರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಚಿಕ್ಕಮಂಗಳೂರಿನಲ್ಲಿ ಪ್ರಸಿದ್ಧ ಲೇಖಕಿ ಅಪ್ಪಟ ಕನ್ನಡತಿ ಡಾ. ಸುಧಾಮೂರ್ತಿಯವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಮಹಿಳಾ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಕೋಲಾರದಲ್ಲಿ ಹಿರಿಯ ಸಾಹಿತಿ ಡಾ. ಎಲ್.ಹನುಮಂತಯ್ಯ ಅವರ ಅಧ್ಯಕ್ಷತೆಯಲ್ಲಿ ಪ್ರಪ್ರಥಮ ದಲಿತ ಸಮ್ಮೇಳನ ನಡೆಯಿತು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲದ ಸಹಯೋಗದಲ್ಲಿ ರಾಜ್ಯಾಂಧ್ಯಂತ ಸಹಕಾರ, ಕೃಷಿ, ತೋಟಗಾರಿಕೆ, ನೀರಾವರಿ, ಬ್ಯಾಂಕಿಂಗ್ ಇತ್ಯಾದಿ ವಿಷಯಗಳ ಕುರಿತು ಅನೇಕ ಸಮಾವೇಶಗಳು ಯಶಸ್ವಿಯಾಗಿ ಆಯೋಜನೆಗೊಂಡಿದ್ದು ಕನ್ನಡ ಸಾಹಿತ್ಯ ಪರಿಷತ್ ಇತಿಹಾಸದಲ್ಲಿ ಪ್ರಥಮ ಎನಿಸಿವೆ.

2018 ಮಾರ್ಚ 15 ರಂದು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಕೋಟಾ ಗ್ರಾಮದ ಕಡಲು ತೀರ ಭಾರ್ಗವ ಡಾ. ಶಿವರಾಂ ಕಾರಂತ ಥೀಮ್ ಪಾರ್ಕನಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಅತೀ ಮುಖ್ಯವಾದ ತಿದ್ದುಪಡೆ ಮಾಡಿರುವುದನ್ನು ಗಮನಿಸಬಹುದಾಗಿದೆ. ಅವುಗಳಲ್ಲಿ ಪ್ರಮುಖವಾಗಿ ಕನ್ನಡ ಸಾಹಿತ್ಯ ಪರಿಷತ್ತು ಹೊಸ ಆಲೋಚನೆ ಆವಿಷ್ಕಾರಗಳಿಗೆ ಮುನ್ನುಡಿ ಬರೆದಿದೆ. ಕಾರ್ಯಕಾರಿ ಸಮಿತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಪ್ರತಿನಿಧಿಯ ಸಂಖ್ಯೆಯನ್ನು ಒಂದರಿಂದ ಎರಡಕ್ಕೆ ಹಾಗೂ ಮಹಿಳೆಯರಿಗೆ ಹೆಚ್ಚಿನ ಪ್ರಾತಿನಿಧ್ಯ ನೀಡಲು ಅದನ್ನು ಸಹ ಒಂದರಿಂದ ಎರಡಕ್ಕೆ ಹೆಚ್ಚಿಸಲಾಗಿದೆ. ಇದರಿಂದ ಒಟ್ಟು 819 ಹೆಚ್ಚುವರಿ ಪ್ರತಿನಿಧಿಗಳು ಪ್ರಾತಿನಿಧ್ಯವನ್ನು ಪಡೆದುಕೊಂಡಿರುವುದು ವಿಶೇಷವಾಗಿದೆ. ಅಷ್ಟೇ ಅಲ್ಲದೆ 3 ವರ್ಷಕ್ಕೊಂದು ಬಾರಿ ನಡೆಯುವ ಚುನಾವಣೆ 5 ವರ್ಷಕ್ಕೆ ವಿಸ್ತರಿಸಿ ಸಾರ್ವಜನಿಕ ಹಣ ಅನವಶ್ಯಕವಾಗಿ ಖರ್ಚಾಗುವುದನ್ನು ತಪ್ಪಿಸುವ ಸದುದ್ದೇಶದಿಂದ ತೆಗೆದುಕೊಂಡ ನಿರ್ಣಯ ಅತ್ಯಂತ ಮಹತ್ವದ್ದಾಗಿದೆ. ಅದರೊಂದಿಗೆ ಕನಿಷ್ಟ 500 ಮತದಾರರಿರುವ ಪ್ರದೇಶವನ್ನು ಗುರುತಿಸಿ ಪ್ರತ್ಯೇಕ ಮತಗಟ್ಟೆ

ಸ್ಥಾಪಿಸುವ ನಿಭಂಧನೆಯನ್ನು, ಹಾಗೂ ಪ್ರತಿ ತಾಲೂಕು ಕೇಂದ್ರದಲ್ಲಿ 1 ಮತಗಟ್ಟೆ ಇರಬೇಕೆಂಬ ನಿರ್ಣಯವನ್ನು ಕೈಗೊಳ್ಳಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಕ್ಷೇತ್ರವ್ಯಾಪ್ತಿಯನ್ನು ಹೆಚ್ಚಿಸಲು ಕನ್ನಡ ನಾಡು, ನುಡಿಗೆ, ಸಂಗೀತ ಕ್ಷೇತ್ರಕ್ಕೆ ಮೌಲ್ಯಯುತವಾದ ಕೊಡುಗೆ ನೀಡಿದ್ದ ಶ್ರೀ ಜಯಚಾಮರಾಜೇಂದ್ರ ಒಡೆಯರ ಜನ್ಮ ಶತಮಾನೋತ್ಸವ ಸಂಭ್ರಮವನ್ನು ಅತ್ಯಂತ ಅರ್ಥಪೂರ್ಣವಾಗಿ ಆಯೋಜಿಸಲಾಗಿದೆ. ಅಷ್ಟೇ ಅಲ್ಲದೆ ಕನ್ನಡ ನಾಡು, ನುಡಿಗೆ ಮರೆಯಲಾಗದ ಕೊಡುಗೆ ನೀಡಿದ ಅನೇಕ ಮಹನೀಯರ ಜನ್ಮ ಶತಮಾನೋತ್ಸವ ಕಾರ್ಯಕ್ರಮಗಳನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸಿಕೊಂಡು ಬರಲಾಗುತ್ತಿದೆ. ಕನ್ನಡ ನಾಡಿನಲ್ಲಿ ಸಾಹಿತ್ಯ, ಸಂಗೀತ, ಕಲೆ, ಕನ್ನಡ ಪರ ಹೋರಾಟ, ಶಿಕ್ಷಣ, ವೈದ್ಯಕೀಯ, ಚಲನಚಿತ್ರ, ಸಮಾಜ ಸೇವೆ, ಕೃಷಿ, ಕೈಗಾರಿಕೆ ಮುಂತಾದ ಕ್ಷೇತ್ರಗಳಲ್ಲಿ ಸಾಧನೆಗೈದ ಗಣ್ಯರನ್ನು ಆಹ್ವಾನಿಸಿ ಅವರೊಂದಿಗೆ ಅರ್ಥಪೂರ್ಣ ಸಂವಾದ ನಡೆಸುವ ಹಾಗೂ ಅಂತಹ ಸಾಧಕರನ್ನು ಗೌರವಿಸುವುದರೊಂದಿಗೆ ಇಂದಿನ ಯುವ ಪೀಳಿಗೆ ಇನ್ನಷ್ಟೂ ಸಮಾಜಮುಖಿ ಕಾರ್ಯಗಳನ್ನು ಮಾಡಲೆಂಬ ಪ್ರೇರಣೆಗಾಗಿ ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಪ್ರಾರಂಭಗೊಂಡಿರುವ ಪ್ರತಿ ತಿಂಗಳು ತಪ್ಪದೆ ನಡೆಯುತ್ತಿರುವ **"ಸಾಧಕರೊಡನೆ ಸಂವಾದ"** ಎಂಬ ವಿನೂತನ ಕಾರ್ಯಕ್ರಮ ಮಹತ್ವದ ಬೆಳವಣಿಗೆಯಾಗಿದೆ. ಈ ಸಂವಾದದಲ್ಲಿ ಇನ್‌ಫೋಸಿಸ್ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಸುಧಾಮೂರ್ತಿಯವರು ಈ ಪ್ರಪ್ರಥಮ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದ್ದರು. ಸಾಧಕರಾಗಿ ವಿಶ್ವವಿಖ್ಯಾತ ವಿಜ್ಞಾನಿ ಡಾ. ಸಿ.ಎನ್.ರಾವ್, ಇಸ್ರೋ ಮಾಜಿ ಅಧ್ಯಕ್ಷರಾದ ಡಾ. ಎ.ಎಸ್.ಕಿರಣಕುಮಾರ, ಪ್ರಸಿದ್ಧ ನ್ಯಾಯಮೂರ್ತಿಗಳಾದ ಡಾ. ಎಂ.ಎನ್.ವೆಂಕಟಾಚಲಯ್ಯ, ಡಾ. ಶಿವರಾಜ್ ಪಾಟೀಲ, ಹಿರಿಯ ಸಾಹಿತಿಗಳಾದ ಪ್ರೊ. ಜಿ.ವೆಂಕಟಸುಬ್ಬಯ್ಯ, ಖ್ಯಾತ ಉದ್ಯಮಿ ಡಾ. ವಿಜಯ ಸಂಕೇಶ್ವರ, ಖ್ಯಾತ ಹೃದಯ ತಜ್ಞರಾದ ಡಾ. ಸಿ.ಎನ್.ಮಂಜುನಾಥ, ಸಾಹಿತಿಗಳಾದ ದೊಡ್ಡರಂಗೇಗೌಡ, ಡಾ. ಕಮಲಾ ಹಂಪನಾ, ಡಾ. ವೈದೇಹಿ, ಡಾ. ವಿಜಯಲಕ್ಷ್ಮೀ ಬಾಳಿಕುಂದ್ರಿ, ಡಾ. ಸಂಧ್ಯಾ ಎಸ್ ಪೈ ಸೇರಿದಂತೆ ಅನೇಕ ದಿಗ್ಗಜರು ಆ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಮರೆಯಲಾಗದ ಕ್ಷಣವಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತು ಪರಿಷತ್ತಿನಲ್ಲಿ ನಡೆಯುವ ಪ್ರತಿ ಕಾರ್ಯಕ್ರಮಗಳನ್ನು ಕನ್ನಡಿಗರ ಪ್ರತಿ ಮನೆ ಮನೆಗಳಿಗೂ ಉಚಿತವಾಗಿ ಮುಟ್ಟಿಸುವ ಸಲುವಾಗಿ ದ್ವೈಮಾಸಿಕ ಪತ್ರಿಕೆಯಾದ **"ಕನ್ನಡ ನುಡಿ"**ಯನ್ನು ಪ್ರಕಟಿಸಿ ಉಚಿತವಾಗಿ ಕಳುಹಿಸಲಾಗುತ್ತದೆ. ಇದರಲ್ಲಿ ಪರಿಷತ್ತಿನ ಕಾರ್ಯ ಯೋಜನೆಗಳು, ಕಾರ್ಯಕ್ರಮಗಳು, ಜಿಲ್ಲಾ ಘಟಕಗಳ ಸುದ್ಧಿಗಳು, ಕನ್ನಡ ಕಣ್ಮಣಿಗಳ ಸಾದರ ಸ್ವೀಕಾರ, ನಾಡು ನುಡಿಗಳ ವಿಶಿಷ್ಟ ಪರಿಚಯ ಹಾಗೂ ಅನೇಕ ಮಹತ್ವದ ಸಾಹಿತ್ತಿಕ ಸಾಂಸ್ಕೃತಿಕ ಸವಿಯನ್ನು ಕನ್ನಡ ನುಡಿ ಪತ್ರಿಕೆಯಲ್ಲಿ ಭಿತ್ತರಗೊಳ್ಳುವುದನ್ನು ನಾವೆಲ್ಲರೂ ನೋಡಿದ್ದೇವೆ. ಇದರೊಂದಿಗೆ **"ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ"** ಪರಿಷತ್ತಿನ ತ್ರೈಮಾಸಿಕ ಪತ್ರಿಕೆಯಾಗಿ ಕಾವ್ಯ, ಸಂಸ್ಕೃತಿ, ಸಂಶೋಧನೆ ಇತ್ಯಾದಿ ವಿಷಯಗಳಲ್ಲಿ ಅಧ್ಯಯನಪೂರ್ಣ ಮೌಲಿಕ ಲೇಖನಗಳನ್ನು ಪ್ರಕಟಿಸಿ ಚಂದಾದಾರರಾದವರಿಗೆ ಕಳುಹಿಸಲಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥಭಂಡಾರ ಅತ್ಯಂತ ಅಪರೂಪವಾಗಿರುವ ಸುಮಾರು 70 ಸಾವಿರಕ್ಕೂ ಹೆಚ್ಚು ಅಮೂಲ್ಯ ಕೃತಿಗಳನ್ನು ಹೊಂದಿರುವ ಪರಿಷತ್ತಿನ ಸರಸ್ವತಿ ಭಂಡಾರವೆನಿಸಿದೆ ಹಾಗೂ ಕನ್ನಡ ನಾಡಿನ ಅತ್ಯಂತ ಹಳೆಯ ಗ್ರಂಥಾಲಯಗಳಲ್ಲಿ ಒಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಭಂಡಾರದಲ್ಲಿ ಪ್ರತ್ಯೇಕವಾಗಿ ಸಂಶೋಧನಾ ವಿಭಾಗದ 15 ಸಾವಿರಕ್ಕೂ ಹೆಚ್ಚು ಅಮೂಲ್ಯ ಗ್ರಂಥಗಳನ್ನು ಓದುಗರ ಪರಾಮರ್ಶನಕ್ಕೆ ಅನುಕೂಲ ಮಾಡಿಕೊಡಲಾಗಿದೆ. ಸಹಸ್ರಾರು

ಸಾಹಿತ್ಯಾಸಕ್ತರು ಉಚಿತವಾಗಿ ಇದರ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. ಇದರೊಂದಿಗೆ ಪುಸ್ತಕ ಮಾರಾಟ ಮಳಿಗೆ, ಪುಸ್ತಕ ಸಂತೆ ಎಂಬ ಶೀರ್ಷಿಕೆಯಲ್ಲಿ ಪರಿಷತ್ತಿನಲ್ಲಿ ಪುಸ್ತಕ ಮಾರಾಟ ಮಳಿಗೆಯಲ್ಲಿ ಪರಿಷತ್ತು ಪ್ರಕಟಿಸುವ ಎಲ್ಲಾ ಪುಸ್ತಕಗಳು ಸೂಕ್ತ ರಿಯಾಯಿತಿ ದರದಲ್ಲಿ ಲಭ್ಯವಾಗುವಂತೆ ವ್ಯವಸ್ಥೆ ಮಾಡಲಾಗಿದೆ.

ಶತಮಾನದ ಹೊಸ್ತಿಲಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದಷ್ಟು ಹಣ ಕ್ರೂಢಿಕರಿಸಬೇಕೆಂಬ ಸದುದ್ದೇಶದಿಂದ ಹಾಗೂ ಅದರ ಮೂಲಕ ಕನ್ನಡ ಸೇವೆಯನ್ನು ವ್ಯಾಪಕಗೊಳಿಸಬೇಕೆಂಬ ನಿಟ್ಟಿನಲ್ಲಿ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಡಾ. ನಂಜುಂಡಪ್ರಸಾದ ಆರ್.ಕೆ ಇವರು **"ಕನ್ನಡ ನಿಧಿ"** ಎಂಬ ವಿನೂತನ ಯೋಜನೆಯನ್ನು ಆರಂಭಿಸಿ ಕನ್ನಡ ನಿಧಿ ಯೋಜನೆಯಲ್ಲಿ ನೂರು, ಸಾವಿರ, ಲಕ್ಷ ಕನ್ನಡ ನಿಧಿಗೆ ದೇಣಿಗೆ ನೀಡಿದ ಅನೇಕ ಮಹನೀಯರು ಸಾಹಿತ್ಯ ಪರಿಷತ್ತು ಬೃಹದಾಕಾರವಾಗಿ ಬೆಳೆಯಲು ಪ್ರೋತ್ಸಾಹಿಸುತ್ತಲೇ ಬಂದಿರುತ್ತಾರೆ. ಇದರೊಂದಿಗೆ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಸಂಬಂಧಿಸಿದಂತೆ ಪ್ರಶಸ್ತಿಗಳನ್ನು ನೀಡಲು ಹಾಗೂ ಕನ್ನಡಪರ ಕಾರ್ಯಕ್ರಮಗಳನ್ನು ನಡೆಸಲು ಕನ್ನಡ ಸಾಹಿತ್ಯಾಭಿಮಾನಿಗಳು, ಉದಾರ ದಾನಿಗಳು, ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ ಆಮೂಲ ನಿಧಿಯನ್ನು ಶಾಶ್ವತ ಠೇವಣಿಯಾಗಿಟ್ಟು ಅದರಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಕಾರ್ಯಕ್ರಮಗಳನ್ನು ದತ್ತಿನಿಧಿ ದಾನಿಗಳ ಅಪೇಕ್ಷೆಯಂತೆ ನಡೆಸಿಕೊಂಡು ಬರಲಾಗುತ್ತಿದೆ. ಇಂತಹ ದತ್ತಿನಿಧಿಗಳ ಸಂಖ್ಯೆ ಸಾವಿರ ಗಡಿದಾಟಿದೆ. ಉಪನ್ಯಾಸ, ಸಾಹಿತ್ತಿಕ ಸ್ಪರ್ಧೆ, ಗ್ರಂಥ ಭಂಡಾರ, ಪುಸ್ತಕ ಖರೀದಿ, ಪುಸ್ತಕ ಪ್ರಕಟಣೆ, ಬಹುಮಾನ, ಪ್ರಶಸ್ತಿ ನೀಡುವಿಕೆ ಎಂಬಿತ್ಯಾದಿ ಆಶಯಗಳನ್ನು ಹೊಂದಿದ ದತ್ತಿನಿಧಿಗಳನ್ನು ಪರಿಷತ್ತು ಹೊಂದಿದೆ. ಈ ದತ್ತಿ ನಿಧಿಗಳಿಂದ ಕೊಡುವ ಪ್ರಧಾನ ಪ್ರಶಸ್ತಿಗಳೆಂದರೆ ಚಾವುಂಡರಾಯ ಪ್ರಶಸ್ತಿ, ಬಿ.ಸರೋಜಾದೇವಿ ಪ್ರಶಸ್ತಿ, ಹಾ.ಮಾ.ನಾ ಪ್ರಶಸ್ತಿ, ಭಾರತೀಸುತ ಪ್ರಶಸ್ತಿ ಇತ್ಯಾದಿ ಸಾಹಿತ್ತಿಕ ಪ್ರಶಸ್ತಿಗಳನ್ನು ಪ್ರತಿವರ್ಷ ಆಯ್ದ ಕನ್ನಡ ಹಿರಿಯ ಕುಸುಮಗಳಿಗೆ ನೀಡಲಾಗುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿದ 150ಕ್ಕೂ ಹೆಚ್ಚಿನ ಮೌಲಿಕ ಕೃತಿಗಳನ್ನು ಕನ್ನಡ–ಕನ್ನಡ ಬೃಹತ್ ನಿಘಂಟಿನ 8 ಸಂಪುಟಗಳನ್ನು ಮೈಸೂರಿನ ಭಾರತೀಯ ಭಾಷಾ ಸಂಸ್ಥಾನದ ಸಹಯೋಗದೊಂದಿಗೆ ಭಾರತವಾಣಿ ಪೋರ್ಟಲ್ ಮೂಲಕ ಡಿಜಿಟಲೈಜೇಶನ್ ಮಾಡಿಸಿ ಅಂತರ್ಜಾಲ ತಾಣದ ಓದುಗರಿಗೆ ಒದಗಿಸಿಕೊಡುವ ಕೆಲಸ ಪ್ರಗತಿಯಲ್ಲಿದೆ. ಭಾಷಾ ಬೆಳವಣಿಗೆಗೆ ಹಾಗೂ ಸಾಹಿತ್ಯ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪ್ರಚಾರ ಮಾಡುವ ನಿಟ್ಟಿನಲ್ಲಿ ನೇಪಾಳಿ ಕಲಾ ಡಾಟ್ ಕಾಂಪ್ರತಿಷ್ಠಾನದೊಂದಿಗೆ ಪರಿಷತ್ತಿನ ಇತಿಹಾಸದಲ್ಲಿ ಮೊದಲ ಬಾರಿಗೆ ಅಂತರಾಷ್ಟ್ರೀಯ ಒಪ್ಪಂದಕ್ಕೆ ಸಹಿ ಹಾಕಿದ್ದು, ಈ ಒಡಂಬಡಿಕೆಯನ್ವಯ ಪರಸ್ಪರ ಭಾಷೆಗಳ 50ಕ್ಕೂ ಹೆಚ್ಚು ಕವಿಗಳ ಒಂದೊಂದು ಕವನಗಳನ್ನು ಭಾಷಾಂತರಿಸಿ ಕನ್ನಡ ಹಾಗೂ ನೇಪಾಳಿ ಭಾಷೆಗಳಲ್ಲಿ ಕವನ ಸಂಕಲನಗಳನ್ನು ಪ್ರಕಟಿಸಲಾಗಿದೆ. ಗೋವಾ ರಾಜ್ಯ ಕ.ಸಾ.ಪ ಗಡಿನಾಡು ಘಟಕ ಹಾಗೂ ಮುಂಬೈ ಕ.ಸಾಪ. ಘಟಕ ಉದ್ಘಾಟನೆ ಮಾಡಿ ಕ.ಸಾ.ಪ ಕಾರ್ಯ ಚಟುವಟಿಕೆಗಳಿಗೆ ಹೊಸದಾಗಿ ಚಾಲನೆ ನೀಡಲಾಗಿದೆ. ಒಂದನೇ ತರಗತಿಯಿಂದ ಎಸ್.ಎಸ್.ಎಲ್.ಸಿ ವರೆಗೆ ಕನ್ನಡ ಮಾಧ್ಯಮ ಶಿಕ್ಷಣ ಪೂರೈಸಿದ ದೇಶದ ಯಾವುದೇ ಭಾಗದ ಅಭ್ಯರ್ಥಿಗಳಿಗೆ ಸರಕಾರದ ನೇರ ನೇಮಕಾತಿಯಲ್ಲಿ ಪ್ರತಿಶತ 5% ರಷ್ಟು ಮೀಸಲಾತಿ ಕಲ್ಪಿಸಿ ಆದೇಶ ಹೊರಡಿಸಿದ್ದರ ಹಿಂದೆ ಕನ್ನಡ ಸಾಹಿತ್ಯ ಪರಿಷತ್ತಿನ ಅವಿರಥ ಹೋರಾಟದ ಫಲವಾಗಿದೆ. ಆ ಅವಿರಥ ಹೋರಾಟಕ್ಕೆ ಕೈ ಜೋಡಿಸಿದ ಕನ್ನಡ ನಾಡಿನ ಸಾಹಿತಿಗಳಿಗೆ, ಕನ್ನಡ ಹೋರಾಟಗಾರರಿಗೆ, ಸಂಘಟನೆಗಳಿಗೆ ಪರಿಷತ್ತು ಅಭಿನಂದನೆ ಸಲ್ಲಿಸಿದ್ದನ್ನು ಸ್ಮರಿಸಬಹುದಾಗಿದೆ. 1940 ನೇ ಇಸ್ವಿಯಿಂದ ಪ್ರಾರಂಭವಾಗಿರುವ ಸಾಹಿತ್ಯ ಪರೀಕ್ಷೆಗಳು ಪರಿಷತ್ತಿನ ಜನಪ್ರೀಯ ಕಾರ್ಯ ಚಟುವಟಿಕೆಗಳಲ್ಲಿ ಒಂದಾಗಿದೆ. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಯ ತಿಳುವಳಿಕೆ ನೀಡುವ ಕನ್ನಡ ಕಾವ, ಜಾಣ, ರತ್ನ ಪರೀಕ್ಷೆಗಳನ್ನು ಪ್ರತಿವರ್ಷ ನಡೆಸಿಕೊಂಡು ಬರುವುದರ ಜೊತೆಗೆ ಹೊಸದಾಗಿ ಕನ್ನಡ ಕಲಿಯುವ

ಆಸಕ್ತರಿಗಾಗಿ ಕನ್ನಡ ಪ್ರವೇಶ ಪರೀಕ್ಷೆಯನ್ನು ಏರ್ಪಡಿಸಿಕೊಂಡು ಬರುತ್ತಿದೆ. ಈ ಪರೀಕ್ಷೆಗಳು ಸರಕಾರದಿಂದ ಅಂಗೀಕಾರ ಹೊಂದಿ ಇದುವರೆಗೂ ಒಂದು ಲಕ್ಷಕ್ಕೂ ಅಧಿಕ ಜನ ಸಾಹಿತ್ಯ ಪರೀಕ್ಷೆಗಳ ಪ್ರಯೋಜನ ಪಡೆಯಲು ಪರಿಷತ್ತು ಅನುಕೂಲ ಮಾಡಿಕೊಟ್ಟಿರುವುದನ್ನು ಕಾಣಬಹುದು.

॥ಸಿರಿಗನ್ನಡಂ ಗೆಲ್ಗೆ॥ ॥ಸಿರಿಗನ್ನಡಂ ಬಾಳ್ಗೆ॥

ಆಕರ:

1. ಕನ್ನಡ ಸಾಹಿತ್ಯ ಪರಿಷತ್ ಪ್ರಕಟಿಸಿರುವ ಕನ್ನಡ ನುಡಿ ಪತ್ರಿಕೆಗಳು.
2. ಸಮ್ಮೇಳನದ ಸ್ಮರಣ ಸಂಚಿಕೆಗಳು